## 84. ಸಚಿವರ ಆಫೀಸ್‌ಗೆ ಇ- ಕಚೇರಿ

ರಾಜ್ಯದ ಎಲ್ಲ ಸಚಿವರ ಕಚೇರಿಗಳಲ್ಲಿ ಇ-ಕಚೇರಿ ತಂತ್ರಾಂಶ ಜಾರಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶಿಸಿದೆ. ಎಲ್ಲ ಕಡತಗಳನ್ನು ಭೌತಿಕವಾಗಿ ಸಲ್ಲಿಸುವುದನ್ನು ತಡೆಹಿಡಿದು ಇ-ಕಚೇರಿ ಮೂಲಕ ಸಲ್ಲಿಸಲು ಎಲ್ಲಾ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ. ಪಾರದರ್ಶಕತೆ, ಕಾಗದರಹಿತ ಕಛೇರಿ ವ್ಯವಸ್ಥೆಗಾಗಿ ಇ-ಕಛೇರಿ ಮಾಡಲಾಗಿದೆ.

ಸಚಿವರ ಕಚೇರಿಗಳಲ್ಲಿ ಆಪ್ತ ಕಾರ್ಯದರ್ಶಿಗಳು ಸಚಿವರ ಲಾಗಿನ್ ಐಡಿ ಬಳಸಿ ಪತ್ರ ವ್ಯವಹಾರ ಹಾಗೂ ಟಿಪ್ಪಣಿ ಡೌನ್‌ಲೋಡ್ ಮಾಡಿಕೊಂಡು, ಸಚಿವರ ಆದೇಶ, ಟಿಪ್ಪಣಿ ಪಡೆದುಕೊಳ್ಳಬೇಕು. ಅದನ್ನು ಸ್ಕ್ಯಾನ್ ಮಾಡಿ ಇ-ಕಚೇರಿ ಮೂಲಕ ಅಪ್ ಲೋಡ್ ಮಾಡಬೇಕು ಎಂದು ಸೂಚಿಸಲಾಗಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:30.05.2020